


2022 ಹೇಗಿರಬೇಕು?

## ಕಳೆದ ವರ್ಷ ಕಲಿತ ಪಾಠ ಮರೆಯದಿರಲಿ



ಕಳೆದ ಎರಡೂವರೆ ವರ್ಷಗಳು ಇಡೀ ಜಗತ್ತಿಗೇ ಕರಾಳವಾಗಿದ್ದವು. ಆದರೆ ನಾನದನ್ನು ಸ್ವಲ್ಪ ಬೇರೆ ರೀತಿಯಲ್ಲಿಯೇ ನೋಡುತ್ತೇನೆ.

ನನಗೆ ಕಳೆದ ಎರಡೂವರೆ ವರ್ಷಗಳು ಚೆನ್ನಾಗಿಯೇ ಇದ್ದವು. ನಾನು ಹೊರಗೆ ಹೋಗಲು ಸಾಧ್ಯವಿರಲಿಲ್ಲ. ಹಾಗಾಗಿ ದೈನಂದಿನ ಆಗುಹೋಗುಗಳು, ಕಮಿಟ್‌ಮೆಂಟ್‌ಗಳು, ಟ್ರಾಫಿಕ್ ಈ ಎಲ್ಲ ರೀತಿಯ ಒತ್ತಡಗಳಿಂದ ಪಾರಾಗಲು ಸಾಧ್ಯವಾಯ್ತು. ಗದ್ದಲ, ಮಾಲಿನ್ಯಗಳಿಲ್ಲದೆ ಶಾಂತಿಯುತ ವಾತಾವರಣ ಇರುತ್ತಿತ್ತು. ನನ್ನ ವೃತ್ತಿಯ ಕೆಲಸಕ್ಕೂ ಈ ಅವಧಿ ಪೂರಕವೇ ಆಗಿದೆ. ಸುತ್ತಲಿನ ವಾತಾವರಣದಲ್ಲಿನ ಪ್ರಶಾಂತತೆಯಿಂದ ನನ್ನ ಮನಸ್ಸು ಮುಕ್ತವಾಗಿ ತೆರೆದುಕೊಂಡಿತು. ಎಕ್ಸಿಬಿಷನ್, ಡೆಡ್‌ಲೈನ್‌ಗಳ ಒತ್ತಡ ಇಲ್ಲದೆ ಶಾಂತಿಯಿಂದ, ಖುಷಿಯಿಂದ ಕೆಲಸ ಮಾಡಲು ಸಾಧ್ಯವಾಯಿತು. ಆನ್‌ಲೈನ್ ಎಕ್ಸಿಬಿಷನ್‌ಗಳು ನಡೆದು ಪೇಂಟಿಂಗ್ಸ್ ಚೆನ್ನಾಗಿ ಮಾರಾಟವಾದವು.

ಒಟ್ಟಾರೆ ಕಳೆದ ಎರಡೂವರೆ ವರ್ಷ ನಮ್ಮ ಜೀವನಶೈಲಿಯನ್ನೇ ಬದಲಿಸಿದೆ. ನಾವು ಏನನ್ನು ಕಳೆದುಕೊಂಡಿದ್ದೆವು ಎಂಬುದನ್ನು ತಿಳಿಸುತ್ತಲೇ ನಮ್ಮ ಅಗತ್ಯ ಮತ್ತು ಆದ್ಯತೆಗಳನ್ನೂ ನಮಗೆ ತಿಳಿಸಿಕೊಟ್ಟಿವೆ. ಕುಟುಂಬದೊಳಗಿನ ಸಂಬಂಧಗಳನ್ನು ಬೆಸೆದಿವೆ. ಇಡೀ ಕುಟುಂಬವೇ ಒಂದಾಗಿ ಕೆಲಸ ಮಾಡುವುದನ್ನು ಕಲಿಸಿದೆ. ಇನ್ನೊಬ್ಬರಿಗೆ ಸ್ಪೇಸ್ ಕೊಡುವುದರ ಮಹತ್ವದ ಅರಿವು ಮೂಡಿಸಿದೆ. ಅಗತ್ಯವಾದದ್ದಷ್ಟನ್ನೇ ಬಳಸಿಕೊಂಡು ಸರಳವಾಗಿ ಬದುಕುವುದನ್ನು ತಿಳಿಸಿಕೊಟ್ಟಿದೆ.

ಈಗ ನಿಧಾನಕ್ಕೆ ನಿರ್ಬಂಧಗಳು ಸಡಿಲಗೊಳ್ಳುತ್ತಿದೆ. ಪರಿಸ್ಥಿತಿ ಮೊದಲಿನ ಹಾಗೆ ಆಗುತ್ತಿರುವಂತೆ ಕಾಣುತ್ತಿದೆ. ಆದರೆ ಕಳೆದ ಎರಡು ವರ್ಷಗಳಲ್ಲಿ ನಾವು ಕಲಿತ ಅಗತ್ಯಆದ್ಯತೆಗಳ ಪಾಠವನ್ನು ಮರೆಯಬಾರದು. ಯಾವ ನಿರ್ಬಂಧ ಇಲ್ಲದಿದ್ದರೂ ನಾವು ಕಲಿತಿರುವ ಪಾಠಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಹಾಗೆ ಅಳವಡಿಸಿಕೊಳ್ಳಲು 2022 ವೇದಿಕೆಯಾಗಬೇಕು. ಆದರಿಂದ ನಾವು, ನಮ್ಮ ಕುಟುಂಬ, ರಾಜ್ಯ, ದೇಶ ಕೊನೆಗೆ ಜಗತ್ತೇ ಸ್ವಸ್ಥವಾಗಲು ಸಾಧ್ಯವಿದೆ.

**-ಗುರುದಾಸ ಶೆಣೈ**
ಕಲಾವಿದ

ಬರೀ ವೈರಸ್ ಭೂತವಷ್ಟೇ ಅಲ್ಲ, ನಿಸರ್ಗದ ತಾಯಿಯ ಮುನಿಸಿನ ಬಿಸಿಯುಸಿರನ್ನೂ ಕಳೆದ ಎರಡು ವರ್ಷಗಳು ನಮ್ಮ ಮೇಲೆ ಸುರಿದಿವೆ. ನಿನ್ನೆ ಮೊನ್ನೆಯವರೆಗೂ 'ಈ ಮಳೆಗಾಲಕ್ಕೆ ಕೊನೆಯೇ ಇಲ್ಲವೇನೋ' ಎನ್ನುವ ಹಾಗೆ ಸುರಿದ ಮಳೆ, ಎದೆಗವುಚಿ ಬೆಳೆಸಿದ ಮಕ್ಕಳು ಪುಂಡರಾಗಿ ಕೈತಪ್ಪಿದಾಗ ಅವ್ವ ಭೋರ್ಗರೆದು ಅತ್ತ ಹಾಗಿತ್ತಲ್ಲವೇ? ಅಮ್ಮನ ಈ ದುಃಖದ ಕಣ್ಣೀರು ಮಕ್ಕಳನ್ನು ಸುಡಲಿಲ್ಲ; ಕೋಡಿಬಿದ್ದು ಮುಳುಗಿಸಿತು. ಬಾಯಿಬಿಟ್ಟ ನೆಲ, ನಡುಮುರಿದುಬಿದ್ದ ಗುಡ್ಡಗಳು ಇಡೀ ಊರುಗಳನ್ನೇ ಮಗುಚಿ ಹಾಕಿದವು. ರಾತ್ರಿ ಬೆಳಗಾಗುವುದರೊಳಗೆ ತಪ್ಪಿಸಿಕೊಂಡು ಹೋಗಲೂ ಒಂದು ದಾರಿ ಉಳಿಸದಂತೆ ಊರುಗಳ ಊರುಭಂಗವಾಗಿ, ಜನರು ನೆಲವನ್ನೂ ನೆಲೆಯನ್ನೂ ಕಳೆದುಕೊಂಡರು. ತನ್ನ ಪಾತ್ರದಲ್ಲಿ 'ಎಲ್ಲ ತನ್ನದೇ' ಎಂದು ಮೆರೆದಾಡುತ್ತಿದ್ದ ಮನುಷ್ಯನ ಬದುಕಿನ ಅವಶೇಷಗಳನ್ನೂ ಉಳಿಸದೆ ಉಕ್ಕಿಬಂದ ನದಿಗಳು ಎಲ್ಲವನ್ನೂ ಹೆಕ್ಕಿ ಹೆಕ್ಕಿ ಕೊಂಡೊಯ್ದವು. ನೆತ್ತಿ ಮೇಲಿನ ಸೂರು, ಜೀವವನ್ನು ತೇಯ್ದು ಬೆಳೆಸಿದ ತೋಟಗಳ ಮರದ ಬೇರು, ಕೂಲಿ ನಾಲಿ ಮಾಡಿ ನಾಳೆಯ ಪಾಲಿಗೆ ಕಟ್ಟಿಟ್ಟುಕೊಂಡಿದ್ದ ಚೂರು ಪಾರುಗಳನ್ನೂ ಬಿಡದೆ ಕೆನ್ನೀರು ಸವರಿಹಾಕಿತು. ಒಂದರ ಹಿಂದೆ ಇನ್ನೊಂದರಂತೆ ನುಗ್ಗಿದ ಸೈಕ್ಲೋನ್‌ಗಳು ಮಳೆಯ ಧಾರೆಯನ್ನು ಸುರಿಯುತ್ತಲೇ ಹೋದವು.

ಬೀಳ್ಕೊಡುತ್ತಿರುವ ವರ್ಷವು, ನೂರು ನೂರು ಸಾವಿನ ವಾಸನೆ ಮೆತ್ತಿಕೊಂಡಿದೆ. ಸಾವಿರ ಸಾವಿರ ಮನಸ್ಸುಗಳು ನೋವಿಗೆ ಮೂಲವಾದ ಆಪಾದನೆ ಹೊತ್ತುಕೊಂಡಿದೆ. ದೀನ ಕಂದಮ್ಮಗಳ, ದಿಕ್ಕೆಟ್ಟ ವೃದ್ಧರ, ಅಸಹಾಯಕರ, ದಮನಿತರ ಆರ್ತನಾದದ ಮೂರ್ತರೂಪದಂತೆ 2021 ಕಾಣಿಸುತ್ತಿದೆ. ಈ ವರ್ಷ ಮೈತುಂಬ ಹೊತ್ತುಕೊಂಡ ಈ ಪಾಪದ ಗುರುತುಗಳಲ್ಲಿ ನಮ್ಮ ಪಾಲೆಷ್ಟು? ಕೇಳಿಕೊಳ್ಳಲೆಂದು ಕನ್ನಡಿ ಮುಂದೆ ನಿಂತರೆ ಯಾವುದೋ ಬಿಕ್ಕಳಿಕೆ ಕೇಳಿಸಿದಂತೆ ಭಾಸವಾಗುತ್ತದೆ. ಅದು ನಮ್ಮ ಅಂತರಾತ್ಮದ್ದೇ ಇರಬಹುದೇ?

ಬಿಡು, ಹೊಸ ವರ್ಷವೆಂದು ಸಂಭ್ರಮಪಡಲೇ ಸಂಕೋಚವಾಗುವಂಥ ಈ ಸಂಕಟವನ್ನು ನೀನಾದರೂ ಕರುಗಿಸುವಂತಾಗಬೇಕು. ಇಡೀ ಜಗವೇ ಈಗ ನಿನ್ನೆಡೆಗೆ